**ಸಿ ಸಿ ನಂ. 2499/2025**
**ಪಿ.ಡಬ್ಲ್ಯೂ- 1**

**ಸಾಕ್ಷಿಯು ದಿನಾಂಕಃ** 04-02-2026 **ರಂದು ವಿಚಾರಣೆಗಾಗಿ ಹಾಜರಾಗಿದ್ದು, ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎಸ್ ಆರ್ ಎಸ್ ., ವಕೀಲರಿಂದ**

ನಾನು ಈಗಾಗಲೇ ನನ್ನ ಪ್ರಮಾಣೀಕೃತ ಹೇಳಿಕೆಯನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿನ ಅಂಶಗಳು ಸತ್ಯದಿಂದ ಕೂಡಿರುತ್ತವೆ. ಅದರಲ್ಲಿನ ಸಹಿ ನನ್ನದೇ ಆಗಿರುತ್ತದೆ.

ದಿಃ **10-04-2025** ರ ಚೆಕ್ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿಃ **1** ಎಂದು ಗುರುತಿಸಲಾಯಿತು. ದಿಃ **14-04-2025** ರ ಬ್ಯಾಂಕಿನ ಹಿಂಬರಹವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿಃ **2** ಎಂದು ಗುರುತಿಸಲಾಯಿತು. ದಿಃ **22-04-2025** ರಂದು ಆರೋಪಿಗೆ ನೀಡಿರುವ ಲೀಗಲ್ ನೋಟಿಸ್ಸಿನ ಕಛೇರಿ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿ.ಪಿ.- **3** ಎಂದು ಗುರುತಿಸಲಾಯಿತು. ಅಂಚೆ ರಸೀದಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿ.ಪಿ.- **4** ಎಂದು ಗುರುತಿಸಲಾಯಿತು. ಅಂಚೆ ಸ್ವೀಕೃತ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿಃ **5** ಎಂದು ಗುರುತಿಸಲಾಯಿತು. **3** ಡಿಜಿಟಲ್ ದಾಖಲೆಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಗಳನ್ನು ನಿಪಿಃ **6** ರಿಂದ **8** ಎಂದು ಮತ್ತು ಪ್ರಮಾಣ ಪತ್ರವನ್ನು ನಿಪಿಃ **9** ಎಂದು ಗುರುತಿಸಲಾಯಿತು.

**ಪಾಟೀಸವಾಲುಃ**

ಪಾಟೀಸವಾಲಿಗಾಗಿ ಸಮಯ ಕೋರಿದ್ದು, ಮುಂದುಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.